ANUBHAVS



# ‘‘ಕೇವಲ ನಿಮ್ಮ ಆಧಾರ ಬಾಪುರಾಯ’’

© Copyright 2010, Manasamarthyadata.com

manasamarthyadata.com

- ಮೇಘನ ಜೋಗ

‘‘ಯಾವನಿಗೆ ಯಾರು ಇಲ್ಲ ಅವನಿಗೆ ಬಾಪೂ ಇದ್ದಾರೆ’’, ನನಗೆ ಸ್ವತಃ ಇದರ ಒಂದು ಸುಂದರ ಅನುಭವ ಆಗಿದೆ. ಬಾಪೂ ಇಲ್ಲದಿದ್ದರೆ ನನಗೆ ಏನಾಗುತ್ತಿತ್ತು ಎಂದು ನಾನು ಎಣಿಸಲು ಸಾಧ್ಯವಿಲ್ಲ.

ಸದ್ಗುರು ಶ್ರೀ ಅನಿರುದ್ಧ ಉಪಾಸನ ಕೇಂದ್ರ ವಾಶಿ, (ನವಿಮುಂಬಯಿ)ಯಲ್ಲಿ ಮಕ್ಕಳಿಗಾಗಿ ಸಂಸ್ಕಾರ ಕೇಂದ್ರ ನಡೆಯುತ್ತಿದೆ. ರವಿವಾರ 6 ಫೆಬ್ರವರಿ 2006 ರಂದು ಮಕ್ಕಳ ಆನಂದಮಯ ವಾತಾವರಣದಿಂದ ನಾನು ಮನೆಗೆ ಹೋದೆನು. ರಿಕ್ಷಾದಿಂದ ಇಳಿದು ‘ಬಿ’ ವಿಂಗ್‌ನ ಲಿಫ್ಟ್ ಬಳಿ ಹೋಗುವಾಗ ‘ಸಿ’ ವಿಂಗ್‌ನ ಶ್ರೀ ರಾಜು ಸಾಲಗಾಂವಕರ ಸಿಕ್ಕಿದರು. ಅವರು ವಿಚಾರಿಸಿದರು ‘‘ಜೊಗ್ ಸಾಹೇಬ್‌ರ ಆರೋಗ್ಯ ಹೇಗಿದೆ?’’ ನನಗೇನು ಅರ್ಥವಾಗಲಿಲ್ಲ. ನಾನವರಿಗೆ ಕೇಳಿದೆ ‘‘ಯಾಕೆ ಏನಾಗಿದೆ ಜೋಗ್ ಸಾಹೇಬರಿಗೆ?’’ ಅವರು ಉತ್ತರಿಸಿದರು ‘‘ಅಂದರೆ ನಿಮಗೇನು ಗೊತ್ತಿಲ್ಲವ, ಅವರು ತುಂಬಾ ಸೀರಿಯಸ್ಸಾಗಿದ್ದಾರೆ, ನೀವು ಹೊರಗೆ ಹೋಗಿದ್ದಿರಾ?’’ ನಾನು ಹೇಳಿದೆ ‘‘ಹೌದು, ನಾನು ಇಗ ಸಂಸ್ಕಾರ ಕೇಂದ್ರದಿಂದ ಬರುತ್ತಿದ್ದೇನೆ. ಇದೆಲ್ಲಾ ನಮ್ಮ ಮಾತು ಲಿಫ್ಟ್‌ನಲ್ಲಿ ನಡೆಯುತ್ತಿತ್ತು. ಮನೆಗೆ ಮುಟ್ಟಿದಾಗ ಅಲ್ಲಿ 10-12 ಜನರಿದ್ದರು. ನಮ್ಮ ಬದಿ ಮನೆಯ ಶ್ರೀ ಜಯಕುಮಾರ್, ನನ್ನ ಪತಿಯ ಹೃದಯವನ್ನು ಮೆಲ್ಲ ಮೆಲ್ಲ ಒತ್ತಿ ಕೃತ್ರಿಮ ಶ್ವಾಸ ಕೊಡಲು ಪ್ರಯತ್ನಿಸುತ್ತಿದ್ದರು. ನಾನು ಅಲ್ಲಿಯ ಪರಿಸ್ಥಿತಿ ನೋಡಿ ಶ್ರೀ ಸಾಲಗಾಂವ್ಕರ್‌ರಿಗೆ ಹೇಳಿದೆ ‘‘ಇವರನ್ನು ಬೇಗನೆ ಆಸ್ಪತ್ರೆಗೆ ಕೊಂಡು ಹೋಗಬೇಕು’’ ನಮ್ಮ ಸೊಸೈಟಿಯ ಇತರರು ವಾಹನದ ತಯಾರಿ ಮಾಡಿದರು. ನನ್ನ ಪತಿಗೆ ಮದ್ದು ಕೊಟ್ಟು ಲಕ್ಷದೀಪ ಆಸ್ಪತ್ರೆಯ ಐಸಿಸಿಯುನಲ್ಲಿ ಭರ್ತಿ ಮಾಡಲಾಯಿತು. ರವಿವಾರವಾಗಿದ್ದರೂ ಕೂಡಾ ಡಾ. ಭಟ್ ಬಂದು ಚಿಕಿತ್ಸೆ ಶುರು ಮಾಡಿದರು. ನನ್ನ ಪತಿಗೆ ಮೆಜರ್ ಹೃದಯಾಘಾತವಾಗಿದೆ. ಎಂದು ಡಾಕ್ಟರ್ ಹೇಳಿದರು. ಅದನ್ನು ಕೇಳಿ ನಾನು ತುಂಬಾ ಹೆದರಿದೆನು. ನನ್ನ ಲಾಕೆಟಿನಲ್ಲಿದ್ದ ಬಾಪೂಜಿಯವರ ಫೋಟೋಕ್ಕೆ ನಾನು ನಮಸ್ಕರಿಸಿ ‘‘ಓಂ ಮನಃ ಸಾಮರ್ಥ್ಯದಾತಾ ಶ್ರೀ ಅನಿರುದ್ಧಾಯ ನಮಃ’’ ಮಂತ್ರದ ಜಪ ಶುರು ಮಾಡಿದೆನು.

ಸೊಸೈಟಿಯ ಅನ್ಯ 20-25 ಜನರ ಒಟ್ಟಿಗೆ ನಾನು ಹೊರಗೆ ಬೆಂಚಿನ ಮೇಲೆ ಕುಳಿತು ಕೊಂಡೆ. ಸ್ವಲ್ಪ ಸಮಯದ ಬಳಿಕ ಡಾ. ಭಾಟೆ ಬಂದು ‘‘72 ಘಂಟೆ ಆಬ್‌ಸರ್‌ವೇಶನ್‌ನಲ್ಲಿ



ಇಡಬೇಕಾಗಿದೆ. ಈಗ ಏನೂ ಹೇಳುವುದಕ್ಕೆ ಆಗುವುದಿಲ್ಲ'' ಎಂದರು ನಂತರ ಡಾಕ್ಟರ್ ನನ್ನ ಪತಿಗೆ 1-2 ಇಂಜೆಕ್ಷನ್ ಕೊಟ್ಟರು. ಹತ್ತು ನಿಮಿಷದ ನಂತರ ನನ್ನ ಪತಿ ವಾಂತಿ ಮಾಡಿದರು. ಅದರ ಶಬ್ಧ ಹೊರಗಿನ ತನಕ ಜೋರು ಜೋರಾಗಿ ಕೇಳುತ್ತಿತ್ತು. ಆಗ ನಾನು ಎನಿಸಿಕೊಂಡೆ, ಈಗ ಇವರ ಸ್ಥಿತಿ ಚಿಂತಾಜನಕವಾಗುತ್ತಿದೆ ಎಂದು. ಕಣ್ಣಿನಲ್ಲಿ ನೀರು, ಕೈಯಲ್ಲಿ ಬಾಪೂರವರ ಫೋಟೋ, ಮುಖದಲ್ಲಿ ''ಓಂ ಮನಃ ಸಾಮಾರ್ಥ್ಯದಾತಾ....''ಜಪ ಮಾಡುತ್ತಲೇ ಇದ್ದೆನು. ಅಷ್ಟರಲ್ಲಿ ನರ್ಸ ಬಂದು ಪೇಷಂಟ್‌ನ ಸ್ಥಿತಿ ಸೀರಿಯಸ್ ಆಗಿದೆ'' ಎಂದು ಹೇಳಿದಳು. ನಮ್ಮ ಎಲ್ಲಾ ಸೊಸೈಟಿಯವರು ಹೆದರಿದ್ದರು. ಯಾಕೆಂದರೆ ನಾನು ಒಬ್ಬಳೇ ಇದ್ದೆ. ನನ್ನ ಮಗ ಹಾಗೂ ಸೊಸೆ ಅಮೆರಿಕದಲ್ಲಿ ಪಿಎಚ್.ಡಿ ಯಲ್ಲಿ ನಿರತರಾಗಿದ್ದರು. ನಾನು ಡಾ. ಕೇಶವ ನರ್ಸಿಕರರವರಿಗೆ ಫೋನ್ ಮಾಡಿದಾಗ ಅವರು, ಗೋವಿದ್ಯಾಪೀಠಮ್, ಕರ್ಜತ್‌ಗೆ ಹೋಗಿದ್ದಾರೆ ಎಂದು ತಿಳಿಯಿತು. ನಂತರ ಪುಣೆಯಲ್ಲಿರುವ ನನ್ನ ಅಣ್ಣ ಹಾಗೂ ಮೈದುನರನ್ನು ಬೇಗನೆ ಬರಲು ಹೇಳಿದೆನು. ಅವರು ಎರಡು ಘಂಟೆಯಲ್ಲಿ ಬಂದು ಬಿಟ್ಟರು. ಆದುದರಿಂದ ನಮ್ಮ ಸೊಸೈಟಿಯವರ ಮನಸ್ಸು ದೃಢವಾಯಿತು. ಪ್ರತಿಯೊಬ್ಬರು ದೇವರಲ್ಲಿ ಪ್ರಾರ್ಥಿಸುತ್ತಿದ್ದರು. ಆದರೆ, ಸಂಜೆ 5 ಘಂಟೆಯ ತನಕ ಏನೂ ಗುಣವಾಗಲಿಲ್ಲ. ಡಾ. ಭಾಟೆ ಹೇಳಿದರು ''ನಾನು ರಾತ್ರಿ ರೌಂಡಿಗೆ ಬಂದಾಗ ನಿಮ್ಮಲ್ಲಿ ಮಾತಾಡುತ್ತೇನೆ. 6 ಘಂಟೆಗೆ ಡಾ. ನರ್ಸಿಕರು ಬಂದರು ಹಾಗೂ ಒಳಗೆ ಹೋಗಿ ಇವರನ್ನು ನೋಡಿದರು. ಆ ರಾತ್ರಿ ಯಾರೂ ನನ್ನನ್ನು ಆಸ್ಪತ್ರೆಯಲ್ಲಿ ನಿಲ್ಲಲು ಬಿಡಲಿಲ್ಲ. ನಾನು ಮನೆಗೆ ಬಂದೆ. ನನ್ನ ಪತಿಯ ಬಳಿ ನನ್ನ ಅಣ್ಣ ಸುರೇಶ್ ಇದ್ದನು. ರಾತ್ರಿ ಡಾಕ್ಟರ್ ಬಂದಾಗ 90 ಪ್ರತಿಶತ ಬ್ಲಾಕೇಜ್ ಇರಬೇಕು ಹಾಗೂ ನಮಗೆ ಎಂಜಿಯೋಗ್ರಾಫಿ ಮಾಡಿಸಬೇಕೆಂದು ಹೇಳಿದರು ಮರು ದಿನ ಅಣ್ಣ ನನಗೆ ಈ ಮಾತು ತಿಳಿಸಿದರು. ಅವನು ಹೇಳಿದ ''ನೀನು ಈಗ ನಿನ್ನ ಮೈದುನನನ್ನು ಮಾತಾಡಿ ನಿಶ್ಚಯ ಮಾಡಬೇಕು, ಎಂಜಿಯೋಗ್ರಾಫಿ ಮಾಡಿದರೆ ಎಷ್ಟು ಹಾಗೂ ಹೇಗೆ ಬ್ಲಾಕೇಜ್ ಇದೆ ಎಂದು ತಿಳಿಯುತ್ತದೆ, ನಂತರ ಎಂಜಿಯೋಗ್ರಾಫಿ ಮಾಡಬೇಕಾಗಿದ್ದರೆ ನಾವು ಇದ್ದೇವೆ'' ಎಂದರು. ನನ್ನ ಅಣ್ಣನ ಮಾತಿನಿಂದ ನನಗೆ ಆಧಾರ ಸಿಕ್ಕಿತು. ಆದರೆ, ಮನಸ್ಸಿನಲ್ಲಿ ಎಣಿಸಿದೆ, ನನ್ನ ಬಾಪೂ ನನಗೆ ಅಂಥ ಸಮಯ ಬರಲು ಬಿಡಲಿಕ್ಕಿಲ್ಲ ಎಂದು.

ಮಂಗಳವಾರ ಎಂಜಿಯೋಗ್ರಾಫಿ ಮಾಡಲು ನಿಶ್ಚಯಿಸಿದೆವು. ಸೋಮವಾರ ರಾತ್ರಿ ನನಗೆ ಮಲಗಲಿಕ್ಕಾಗಲಿಕ್ಕಿಲ್ಲ ಎಂದು ಮುಂಚೆಯೇ ನಾನು ಘೋರಕಷ್ಟೋದ್ಧರಣ ಸ್ತೋತ್ರ ಓದಲು ಶುರು ಮಾಡಿದೆನು. ಬೆಳಿಗ್ಗೆ 4.30ಕ್ಕೆ ಸ್ನಾನ ಮಾಡಿ ಪೂಜೆ ಮಾಡಿದೆನು. ಬಾಪೂಜಿಯವರಿಗೆ ಕೈ ಜೋಡಿಸಿ ಪ್ರಾರ್ಥನೆ ಮಾಡಿದೆನು. ಬಾಪೂ ಎಂಜಿಯೋಪ್ಲಾಸ್ಟ್‌ಗೆ 2.5ಲಕ್ಷ ದಿಂದ 3 ಲಕ್ಷ



ರೂ.ತಕನ ಖರ್ಚು ಇದೆ. ನನ್ನ ಹತ್ತಿರ ಅಷ್ಟು ಹಣ ಇಲ್ಲ. ನಾನು ನನ್ನ ಮಗನಿಗೆ ಕಷ್ಟಕೊಡಲು ಇಚ್ಛಿಸುವುದಿಲ್ಲ. ಇಂಥ ಸಮಯದಲ್ಲಿ ನನಗೆ ನೀನೇ ಆಧಾರ. ನನ್ನ ಮನಸ್ಸು ಹೇಳುತ್ತದೆ ನಿನ್ನ ಸೇವೆಯಲ್ಲಿ ಸಂತೋಷ ಪಡುವ ಭಕ್ತರ ಸಹಾಯ ನೀನು ಮಾಡಿಯೇ ಮಾಡುತ್ತಿ. ನೀನು ನನ್ನೊಟ್ಟಿಗೆ ಇದ್ದಿ ಎಂಬ ವಿಶ್ವಾಸದಿಂದ ನಾನು ನನ್ನ ಪತಿಯನ್ನು ಎಂಜಿಯೋಗ್ರಾಫಿ ಮಾಡಿಸಲು ಕೊಂಡು ಹೋಗುತ್ತಿದ್ದೇನೆ''

ಡಾ. ಭಾಟೆ, ಸುರೇಶ್ (ಅಣ್ಣ), ವಿಜಯ (ಅಳಿಯ) ಹಾಗೂ ನಾನು ಇವರನ್ನು ಆ್ಯಂಬುಲೆನ್ಸ್‌ನಲ್ಲಿ ಲಕ್ವದೀಪ ಆಸ್ಪತ್ರೆಯಿಂದ ಎಸ್.ಆರ್. ಮೆಹ್ತಾ ಆಸ್ಪತ್ರೆಗೆ ಕೊಂಡು ಹೋದೆವು. ಅಲ್ಲಿ ಎಂಜಿಯೋಗ್ರಾಫಿಯಿಂದ ತಿಳಿಯಿತೇನೆಂದರೆ, ಹೃದಯ, ಮೆದುಳು ಹಾಗೂ ಕಿಡ್ನಿಯ ರಕ್ತ ಸಂಚಾರ ಚೆನ್ನಾಗಿ ನಡೆಯುತ್ತಿದೆ. ಎಂಜಿಯೋಪ್ಲಾಸ್ಟಿಯ ಆಗತ್ಯವಿಲ್ಲ. ಜೋಗ ಸಾಹೇಬರು ನಾರ್ಮಲ್ ಆಗಿದ್ದರು.

ನನ್ನ ಬಾಪೂಜಿಯವರಿಗೆ ಮಾಡಿದ ಪ್ರಾರ್ಥನೆ ಹಾಗೂ ನನ್ನ ಸದ್ಗುರು ಮೇಲಿನ ವಿಶ್ವಾಸ ಬಣ್ಣ ತಂದಿತು. ''ನೀನು ಹಾಗೂ ನಾನು ಕೂಡಿ......ಬಾಪೂರವರ ಈ ವಚನದ ನೆನಪು ಬಂದಿತು. ನಮ್ಮ ಸೊಸೈಟಿಯ ಹಿತ ಚಿಂತಕರು ಹಾಗೂ ಉಪಾಸನ ಕೇಂದ್ರದ ಎಲ್ಲಾ ಭಕ್ತರ ಪ್ರಾರ್ಥನೆಯಿಂದ ನನ್ನ ಮನಸ್ಸು ದೃಢವಾಯಿತು. ನನಗೆ ಆತ್ಮಬಲ ಸಿಕ್ಕಿತು. ನಾನು ಅವರೆಲ್ಲರ ಋಣಿಯಾದೆನು.

ಈ ಕಲಿಯುಗದಲ್ಲಿ ನನ್ನ ಪರಮೇಶ್ವರನು ಸಾಕ್ಷಾತ್ ಸಗುಣ ರೂಪದಲ್ಲಿ ಪ್ರಕಟವಾಗಿದ್ದಾನೆ. ನಾವು ಎಲ್ಲೇ ಇದ್ದರೂ, ಅಂತಃಕರಣದಿಂದ ಶರಣಾಗತನಾದ ಭಕ್ತನಿಗೆ ಅವನ (ಬಾಪೂಜಿಯ) ಸಹಾಯ ಸಿಕ್ಕೇ ಸಿಗುತ್ತದೆ. ಬಾಪೂಜಿ ನಿಮ್ಮ ಚರಣಕ್ಕೆ ನಮ್ಮ ಪರಿವಾರದ ಕೋಟಿ - ಕೋಟಿ ಪ್ರಣಾಮಗಳು

ANUBHAVS

# HARI OM

© Copyright 2010, Manasamarthyadata.com

manasamarthyadata.com